ಸಿ.ಸಿ .ನಂ.26/2023 ಪಿಡಬ್ಲೂಃ 1

ದಿನಾಂಕಃ 23-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಪಿ ಎಸ್ ಎನ್ ವಕೀಲರಿಂದಃ**

4. ನಾನು ಬೆಕರಿಯಲ್ಲಿ ತಿಂಡಿಗಳನ್ನು ಮಾಡಿ ಕೊಡುತ್ತಿದ್ದೆ , ಈಗ ಏನು ಕೆಲಸ ಮಾಡುತ್ತಿಲ್ಲ ಮನೆಯಲ್ಲಿ ಇದ್ದೇನೆ . ನಾನು ಬಿಪಿಎಲ್ ಕಾರ್ಡ ಹೊಂದಿದ್ದೇನೆ . ಬಿಪಿಎಲ್ ಕಾರ್ಡ ಹೊಂದುವ ಸಮಯದಲ್ಲಿ ನಮ್ಮ ಕುಟುಂಬದ ಕುರಿತಾಗಿ ಮಾಹಿತಿಯನ್ನು ಕೊಡಬೇಕಾಗುತ್ತದೆ ಎಂದರೆ ಸರಿ . ಕುಟುಂಬದ ಆದಾಯ ವಾರ್ಷಿಕ 20 ಸಾವಿರ ರೂಪಾಯಿ ಇರುವ ವರೆಗೆ ಬಿಪಿಎಲ್ ಕಾರ್ಡ ಕೊಡುತ್ತಾರೆ ಎಂದರೆ ಸರಿ . ರೇಶನ್ ಕಾರ್ಡಗೆ ಅರ್ಜಿ ಕೊಡುವಾಗ ಒಂದು ಪ್ರಮಾಣ ಪತ್ರ ಕೊಡಬೇಕಾಗುತ್ತದೆ ಎಂದರೆ ಸರಿ .

5. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಆರೋಪಿಗೆ ಯಾವುದೇ ನೋಟಿಸನ್ನು ಕೊಟ್ಟಿಲ್ಲ. ಆರೋಪಿ ಚೆಕ್ ನ್ನು ಹಾಕು ಎಂದು ನನಗೆ ಕೊಟ್ಟಿದ್ದರು ನಾನು ಅದನ್ನು ಬ್ಯಾಂಕಿಗೆ ಹಾಕಿದ್ದೆ . 4 ದಿನ ಬಿಟ್ಟು ವಕೀಲರ ಬಳಿ ಹೋಗಿದ್ದೆ , ವಕೀಲರು ನೋಟಿಸನ್ನು ಕೊಟ್ಟರು. ನೋಟಿಸು ಕೊಡುವಾಗ ವಕೀಲರಿಗೆ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ . ಏನು ನಡೆದಿತ್ತು ಆ ಬಗ್ಗೆ ಮಾಹಿತಿಯನ್ನು ವಕೀಲರಿಗೆ ಕೊಟ್ಟಿರುತ್ತೇನೆ . ನಾನು ಏನನ್ನು ಹೇಳಿದ್ದೆ ಅದನ್ನೇ ನೋಟಿಸಿನಲ್ಲಿ ಹೇಳಿರುತ್ತಾರೆ . ಫಿರ್ಯಾದನ್ನು ತಯಾರು ಮಾಡುವಾಗ ನಾನೇ ಮಾಹಿತಿ ಕೊಟ್ಟಿರುತ್ತೇನೆ. ನೋಟಿಸಿನಲ್ಲಿ ಏನು ಬರೆದಿದ್ದಾರೆ ಹಾಗೂ ಕಂಪ್ಲೆಂಟ್ ನಲ್ಲಿ ಏನು ಬರೆದಿದ್ದಾರೆ ನೋಡಿ ನಾನು ಹೇಳಿರುವ ಸಂಗತಿ ಸರಿಯಾಗಿದೆ ಎಂದು ಓದಿ ಕೊಂಡಿದ್ದೇನೆ . ಗಣಕೀಕೃತ ಆದ ನಂತರ ತಿದ್ದುಪಡಿ ಆಗಿದೆ . ಅದಕ್ಕೆ ಸಹಿ ಮಾಡುವ ಸಂದರ್ಭದಲ್ಲಿ ನೋಡಿ ತಿದ್ದುಪಡಿ ಮಾಡಿಸಿರುತ್ತೇನೆ. ಯಾವಾಗ ಮಾಡಿಸಿದ್ದೇನೆ ನೆನಪಿಲ್ಲ. ನೋಟಿಸನ್ನು ಓದುವ ಸಂದರ್ಭದಲ್ಲಿ ಓದಿ ತಿದ್ದುಪಡಿ ಮಾಡಿಸಿರುತ್ತೇನೆ .

ನ್ಯಾಯಾಲಯದ ಮುಂದೆ ಪ್ರಕರಣ ದಾಖಲಿಸುವ ಪೂರ್ವದಲ್ಲಿ ತಿದ್ದುಪಡಿಯನ್ನು ವಕೀಲರ ಮೂಲಕ ಮಾಡಿಸಿದ್ದೀರಾ ಎಂದರೆ ಸಾಕ್ಷಿ ಯಾವಾಗ ಮಾಡಿಸಿದ್ದೇನೆ ಎಂದು ನೆನಪಿಲ್ಲ ಎಂದು ನುಡಿದಿರುತ್ತಾರೆ .

6. ನನಗೆ ಸುಮಾರು ಬ್ಯಾಂಕುಗಳಲ್ಲಿ ಸಾಲ ಮಾಡಿ ಅನುಭವ ಇದೆ ಎಂದರೆ ಸರಿ . ಒಂದು ಸಾಲಕ್ಕಾಗಿ ಅರ್ಜಿ ಸಲ್ಲಿಸಿದಾಗ ಯಾವ ಯಾವ ದಾಖಲಾತಿಗಳನ್ನು ಕೊಡಬೇಕಾಗುತ್ತದೆ ಆ ಬಗ್ಗೆ ಮಾಹಿತಿ ಇದೆ ಎಂದರೆ ಸರಿ . 2020-2021 ರ ಸಂದರ್ಭದಲ್ಲಿ ನಾನು ಮನೆಯನ್ನು ಕಟ್ಟುತ್ತಿದ್ದೆ ಎಂದರೆ ಸರಿಯಲ್ಲ . 2013-14 ರಲ್ಲಿ ಮನೆಯ ರಿಪೇರಿ ಮಾಡಿಸಿರುತ್ತೇನೆ . ಆ ಸಂದರ್ಭದಲ್ಲಿ ಮುನ್ಸಿಪಾಲಿಟಿಯಿಂದ 4 ಲಕ್ಷ ರೂಪಾಯಿ ಲೋನ್ ಮಾಡಿರುತ್ತೇನೆ. ಅದನ್ನು ಹೊರತು ಪಡಿಸಿ ಯಾವುದೇ ಕೈಗಡ ಸಾಲ ಮಾಡಿಲ್ಲ . ಕೆನರಾ ಸಾರಸತ್ವ ಕ್ರೆಡಿಟ್ ಸೌಹಾರ್ದ ಬ್ಯಾಂಕು ಬಗ್ಗೆ ಗೊತ್ತಿದೆ . ಆ ಬ್ಯಾಂಕಿನಲ್ಲಿ ನಾನು ಬಂಗಾರ ಅಡವಿಟ್ಟು ಸಾಲ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು , ಸಂಧ್ಯಾ ನಾರಾಯಣ ನಾಯ್ಕ , ಮಂಜುಳಾ ದೇವರಾಯ ನಾಯ್ಕ ಎಲ್ಲಾ ದೇವರಹಕ್ಕಲದವರು ಎಂದರೆ ಗೊತ್ತಿಲ್ಲ . ಕೆನರಾ ಸಾರಸತ್ವ ಬ್ಯಾಂಕಿನವರು ನನಗೆ ಹಾಗೂ ಮಂಜುಳಾ ನಾಯ್ಕ , ಸಂಧ್ಯಾ ನಾರಾಯಣ ನಾಯ್ಕ ಮೂವರಿಗೂ ನಕಲಿ ದಾಗಿನುಗಳನ್ನು ಇಟ್ಟು ಸಾಲ ಮಾಡಿದ ಬಗ್ಗೆ ನೋಟಿಸನ್ನು ಕೊಟ್ಟಿದ್ದರು ಎಂದರೆ ಸುಳ್ಳು . ದಿನೇಶ ರತ್ನಾಕರ ಶೇಟ್ ಎಂದರೆ ಕೆನರಾ ಸಾರಸತ್ವ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಾರೆ ಎಂದರೆ ಗೊತ್ತಿಲ್ಲ. ನಾನು ಒಂದುವೇಳೆ ಆ ಬ್ಯಾಂಕಿನಲ್ಲಿ ಸಾಲ ಮಾಡಿದ್ದರೆ ಆ ದಾಖಲಾತಿಗಳನ್ನು ನ್ಯಾಯಾಲಯದ ಮೂಲಕ ತಿರಿಸಿಕೊಳ್ಳಲು ತೊಂದರೆ ಇಲ್ಲ. ನನಗೆ ನೀಡಿರುವ ಶೋಕಾಸ್ ನೋಟಿಸಿನಲ್ಲಿ ಪ್ರತ್ಯೇಕವಾಗಿ 10 ಬಾಂಡ್ ಗಳ ಮೂಲಕ ವಿವಿಧ ದಿನಾಂಕಗಳಲ್ಲಿ ಅಂತೂ ರೂ . 31,99,500/- ಸಾಲವನ್ನು ನೈಜವಲ್ಲದ ದಾಗಿನುಗಳನ್ನು ಅಸಲಿ ಎಂದು ದೃಢಿಕರಿಸಿ ಸಾಲ ಪಡೆದಿದ್ದೀರಿ ಎಂದು ವಿಚಾರಣೆಗಾಗಿ ನಮೂದಾಗಿತ್ತು ಎಂದರೆ ಸುಳ್ಳು .

ಪಿಡಬ್ಲೂಃ 1

7. ಇಲ್ಲಿಗೆ ಬಂದ ನಂತರ ಮಂಜುಳಾ ನಾರಾಯಣ ನಾಯ್ಕರವರ ಪರಿಚಯ ಆಗಿದೆ . ಮಂಜುಳಾ ನಾಯ್ಕರವರು ಕೂಡ ದಿಃ 18-09-2023 ರಿಂದ ದಿಃ 17-11-2023ರ ಅವಧಿಯಲ್ಲಿ ಪ್ರತ್ಯೇಕ ಬಾಂಡ್ ಗಳ ಮೂಲಕ ವಿವಿಧ ದಿನಾಂಕಗಳಂದು ಅಂತೂ ರೂ. 9,24,000/- ಸಾಲವನ್ನು ನೈಜವಲ್ಲದ ದಾಗಿನುಗಳನ್ನು ಅಸಲಿ ಎಂದು ದೃಢಿಕರಿಸಿ ಸಾಲ ಪಡೆದಿದ್ದೀರಿ ಎಂದು ವಿಚಾರಣೆಗಾಗಿ ನಮೂದಾಗಿತ್ತು ಎಂದರೆ ಗೊತ್ತಿಲ್ಲ .ನಾವು ಖೊಟ್ಟಿ ಬಂಗಾರ ಇಟ್ಟು ಸಾಲ ಪಡೆದುಕೊಂಡ ಬಗ್ಗೆ ದಿನೇಶ ರತ್ನಾಕರ ಶೇಟ್ ಬಂಗಾರ ಪರಿವೀಕ್ಷಕರು ಬ್ಯಾಂಕಿನಿಂದ ಅಮಾನತ್ತು ಗೊಳಿಸಿದ್ದಾರೆ ಎಂದರೆ ಗೊತ್ತಿಲ್ಲ. ದಿನೇಶ ಶೇಟ್ ರವರ ಬಂಗಾರದ ಅಂಗಡಿ ಹಾಗೂ ನನ್ನ ಸ್ನೇಹಿತೆ ಮಂಜುಳಾ ನಾಯ್ಕರವರ ಅಂಗಡಿ ಎರಡು ಹೊಂದಿಕೊಂಡಿವೆ ಎಂದರೆ ಗೊತ್ತಿಲ್ಲ. ಬಂಗಾರ ನನ್ನದು ಹಾಗೂ ನನ್ನ ಮಗಳದ್ದು ಆಗಿತ್ತು . ಈ ಸಾಲವನ್ನು ಪಡೆಯುವ ಸಂದರ್ಭದಲ್ಲಿ ನನ್ನ ಯಜಮಾನರ ಹಾಗೂ ಮಕ್ಕಳ ಒಪ್ಪಿಗೆಯನ್ನು ಪಡೆದಿರಲಿಲ್ಲ .

8. ಆರೋಪಿ ಸಾಲ ಬೇಕು ಎಂದು ಕೇಳಿದಾಗ ಯಾರು ಇರಲಿಲ್ಲ . ಹಣ ಕೊಡುವ ಸಂದರ್ಭದಲ್ಲಿಯೂ ಕೂಡ ಯಾರು ಇರಲಿಲ್ಲ. ಯಾವುದೇ ಒಂದು ಸಾಲ ಮಾಡಿದಾಗ ಆ ಬ್ಯಾಂಕಿನವರು ನಮ್ಮ ಉಳಿತಾಯ ಖಾತೆಗೆ ಹಣವನ್ನು ವರ್ಗಾವಣೆ ಮಾಡುತ್ತಾರೆ ಎಂದರೆ ಸಾಕ್ಷಿ ನನ್ನ ಅಕೌಂಟ್ ನಲ್ಲಿ ಹಣ ಇಡಬೇಕೆಂದು ಹೇಳಿದರೆ ಇಡುತ್ತಾರೆ ಕ್ಯಾಶ್ ಬೇಕು ಎಂದು ಹೇಳಿದರೆ ಕೊಡುತ್ತಾರೆ . ಯಾವುದೇ ಒಬ್ಬ ವ್ಯಕ್ತಿಗೆ ಸಾಲವನ್ನು ಕೊಡಬೇಕಾದರೆ ಅಂತಹ ವ್ಯಕ್ತಿಯ ಅಕೌಂಟ್ ಗೆ ಹಣವನ್ನು ವರ್ಗಾಯಿಸಿ ಎಂದು ಹೇಳಿದರೆ ವರ್ಗಾಯಿಸುತ್ತಾರೆ ಎಂದರೆ ಸರಿ . ಯಾವುದೇ ಬ್ಯಾಂಕಿನವರು ಹಣವನ್ನು ನಗದಾಗಿ ಕೇಳಿದರೂ ಕೂಡ ನಮ್ಮ ಉಳಿತಾಯ ಖಾತೆಗೆ ಹಾಕುತ್ತಾರೆ ಎಂದರೆ ಸರಿ . ಯೂನಿಯನ್ ಬ್ಯಾಂಕಿನಲ್ಲಿ ನನ್ನ ಉಳಿತಾಯ ಖಾತೆ ಇದೆ . ಯೂನಿಯನ್ ಬ್ಯಾಂಕಿನ ಉಳಿತಾಯ ಖಾತೆಯ ಉತಾರ ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ . ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ. ಆರೋಪಿಗೆ ಇದೇ ಮೊದಲನೇ ಸಲ ಸಾಲವನ್ನು ಕೊಟ್ಟಿರುತ್ತೇನೆ. ಆರೋಪಿ ನನ್ನ ವಿರುದ್ಧ

ಅಂಕೋಲಾ ಪೋಲಿಸ್ ಠಾಣೆಯಲ್ಲಿ ದಿಃ 16-03-2021 ರಂದು ದೂರನ್ನು ದಾಖಲಿಸಿದ್ದರು ಎಂದರೆ ಸಾಕ್ಷಿ ದೂರನ್ನು ದಾಖಲಿಸಿದ್ದರು ಆದರೆ ದಿನಾಂಕ ನೆನಪಿಲ್ಲ ಎಂದು ನುಡಿದಿರುತ್ತಾರೆ . ನನ್ನನ್ನು ಅಂಕೋಲಾ ಪೋಲಿಸ್ ಠಾಣೆಗೆ ವಿಚಾರಣೆಗೆ ಕರೆದಿದ್ದರು ಎಂದರೆ ಸರಿ . ಅವರು ಕೊಟ್ಟ ದೂರಿಗೆ ಸಂಬಂಧಪಟ್ಟಂತೆ ನಾನು ಮುಚ್ಚಳಿಕೆಯನ್ನು ಬರೆದುಕೊಟ್ಟಿದ್ದೆ ಎಂದರೆ ಸಾಕ್ಷಿ ಮುಚ್ಚಳಿಕೆ ಅಲ್ಲ , ಅವರ ಕಂಪ್ಲೆಂಟಿಗೆ ಹಾಜರಿದ್ದೆ ಎಂದು ಒಂದು ಸಹಿ ಮಾಡಿ ಎಂದು ಹೇಳಿದ್ದರು , ಸಹಿ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ . ಸಹಿ ಮಾಡಿದ ದಾಖಲೆಗೆ ಏನೇನು ಬರವಣಿಗೆ ಆಗಿದೆ ಎಂದು ಓದಿದ್ದೀರಾ ಎಂದರೆ ಸಾಕ್ಷಿ ಅದು ಖಾಲಿ ಇತ್ತು , ಸಹಿ ಮಾಡು ಎಂದು ಹೇಳಿದರು , ಸಹಿ ಮಾಡಿಕೊಟ್ಟು ಬಂದಿದ್ದೇನೆ. ಎಷ್ಟು ಪುಟಗಳಿಗೆ ಸಹಿ ಮಾಡಿದ್ದೇನೆ ನೆನಪಿಲ್ಲ. ಹಾಳೆಯ ಕೆಳಗಡೆ ಸಹಿ ಮಾಡಿರುತ್ತೇನೆ . ಆರೋಪಿ ಕೊಟ್ಟ ದೂರು ಏನಾಗಿತ್ತು ಹಾಗೂ ಸಹಿ ಮಾಡಿದ ದಾಖಲಾತಿ ಮಾಹಿತಿ ಹಕ್ಕು ಅಧಿನಿಯಮದಡಿ ಕೇಳಿದ್ದೀರಾ ಎಂದರೆ ಸಾಕ್ಷಿ ನಾನು ವಕೀಲರಿಗೆ ಹೇಳಿದ್ದೆ ಅವರು ತರಿಸಿಕೊಂಡಿರಬಹುದು . ಠಾಣೆಗೆ ನಾನು ಒಬ್ಬಳೇ ಹೋಗಿದ್ದೆ . ಯಾವುದೇ ಒಂದು ದಾಖಲಾತಿಗೆ ಸಹಿ ಮಾಡುವಾಗ ಅದನ್ನು ಓದಿ ಸಹಿ ಮಾಡಬೇಕೆಂಬ ಜ್ಞಾನ ಇದೆ . ನಾನು ಪೋಲಿಸರ ಮುಂದೆ ಆರೋಪಿ ಹಲವಾರು ಬಾರಿ ಸಾಲ ಕೇಳಿದಾಗ ಕೊಟ್ಟಿರುತ್ತೇನೆ ಎಂದು ಹೇಳಿರಲಿಲ್ಲ . ಆ ಸಂದರ್ಭದಲ್ಲಿ ಇರುವ ಪಿ ಎಸ್ ಐ ಕುಮಟಾದಲ್ಲಿರುವವರು ಅಂಕೋಲಾಗೆ ವರ್ಗಾವಗೆ ಗೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ಆರೋಪಿ ಕಂಪ್ಲೆಂಟ್ ಕೊಡುವಾಗ ಅವರ ಮೂರು ಚೆಕ್ ಗಳನ್ನು ನಾನು ಇಟ್ಟುಕೊಂಡಿದ್ದೇನೆ, ಅದನ್ನು ಪರತ್ ಕೊಡಿಸಬೇಕೆಂದು ದೂರನ್ನು ಕೊಟ್ಟಿದ್ದರು ಎಂದರೆ ಸರಿ . ನಾನು ಈ ಚೆಕ್ ನ್ನು ನಗದೀಕರಿಸಿದ ನಂತರ ನನ್ನ ಬಳಿ ಇಟ್ಟ ಇನ್ನೆರಡು ಚೆಕ್ ಗಳನ್ನು ನನ್ನ ಸ್ನೇಹಿತೆಯಾದ ಮಂಜುಳಾ ನಾಯ್ಕ , ಗೀತಾ ಭಂಡಾರಕರ ರವರಿಗೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಅವರಿಗೆ ಚೆಕ್ ನ್ನು ಕೊಟ್ಟಿದ ನಂತರ ಅವರು ತಮ್ಮ ಮನಸೋ ಇಚ್ಛೆ ಮೊತ್ತವನ್ನು ಬರೆದು ಅವರು ನಗದೀಕರಣಕ್ಕೆ ಹಾಕಿರುತ್ತಾರೆ ಎಂದರೆ ಸುಳ್ಳು . ಅವರು ಚೆಕ್ ನ್ನು ನಗದೀಕರಣಕ್ಕೆ ಹಾಕಿದ ನಂತರ ವಕೀಲರ ಮೂಲಕ ಆರೊಪಿಗೆ ನೋಟಿಸನ್ನು ಕೊಟ್ಟಿದ್ದರು ಎಂದರೆ ಗೊತ್ತಿಲ್ಲ . ಹಾಗೇ ನೋಟಿಸನ್ನು ಕೊಟ್ಟ ನಂತರ ನಾನು ನನ್ನ

ಬಳಿ ಇರುವ ಒಂದು ಚೆಕ್ ನ್ನು ದುರುಪಯೋಗ ಪಡಿಸಿಕೊಳ್ಳುವುದು ಅಲ್ಲದೇ ಇನ್ನೇರಡು ಚೆಕ್ ನ್ನು ಅವರ ಮೂಲಕ ನಗದೀಕರಣಕ್ಕೆ ಹಾಕಿ ಹಣ ಲಪಟಾಯಿಸುವ ಉದ್ದೇಶ ಹೊಂದಿದ್ದೆವು ಎಂದು ಆ ಸಂದರ್ಭದಲ್ಲಿ ಆರೋಪಿಗೆ ಕಂಡು ಬಂದಿತು ಎಂದರೆ ಸಾಕ್ಷಿ ದುರುಪಯೋಗ ಪಡಿಸಿಕೊಂಡಿಲ್ಲ , ನನಗೆ ಕೊಟ್ಟಿರುವ ಚೆಕ್ ನ್ನು ನನಗೆ ಬರಬೇಕಾಗಿದ್ದ ಹಣಕ್ಕೆ ಬ್ಯಾಂಕಿಗೆ ಹಾಕು ಎಂದು ಹೇಳಿದ್ದರು , ಹಾಕಿರುತ್ತೇನೆ ಎಂದು ನುಡಿದಿರುತ್ತಾರೆ . ಆ ವಿಷಯ ಗೊತ್ತಾದ ನಂತರ ನನ್ನ ಮೇಲೆ ಹಾಗೂ ಆ ಇನ್ನಿಬ್ಬರ ಮೇಲೆ ಅಂಕೋಲಾ ಪೋಲಿಸ್ ಠಾಣೆಗೆ ದೂರನ್ನು ಕೊಟ್ಟಿದ್ದರು ಎಂದರೆ ಗೊತ್ತಿಲ್ಲ ಅಂಕೋಲಾ ಪೋಲಿಸ್ ಠಾಣೆಯವರು ಸರಿಯಾದ ತನಿಖೆ ಮಾಡದೇ ಇರುವ ಕಾರಣ ಆರೋಪಿ ಎಸ್ ಪಿ ಯವರಲ್ಲಿ ದೂರನ್ನು ಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ಅಂಕೋಲಾ ಪೋಲಿಸ್ ಠಾಣೆಯವರು ನನ್ನನ್ನು ಎರಡು ಬಾರಿ ಕರೆಸಿದ್ದರು. ಎರಡನೇ ಬಾರಿ ಕರೆಸಿದಾಗ ನನ್ನ ಮೇಲೆ ಇರುವ ದೂರಿನ ವಿಷಯವನ್ನು ನಾನು ತಿಳಿದುಕೊಂಡಿಲ್ಲ . ನಮ್ಮ ವಕೀಲರಿಗೆ ಮೊದಲು ಕಂಪ್ಲೆಂಟನ್ನು ಕೊಟ್ಟಿದ್ದಲ್ಲದೇ ಎರಡನೇ ಕಂಪ್ಲೆಂಟ್ ಕೊಟ್ಟಿದ್ದಾರೆ ಎಂದು ಪೋನ್ ಮಾಡಿ ಹೇಳಿದ್ದೆ . ಆ ಸಂದರ್ಭದಲ್ಲಿ ಏನು ಹೇಳಬೇಕೆಂದು ವಕೀಲರ ಮೂಲಕ ಮಾಹಿತಿಯನ್ನು ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ . ಹೋಗಿ ಬನ್ನಿ ಎಂದು ಹೇಳಿದ್ದರು . ಎರಡನೇ ಬಾರಿ ಕರೆದಾಗ ಇನ್ನಿಬ್ಬರು ಕೂಡ ಹೋಗಿದ್ದೆ ಎಂದರೆ ಸುಳ್ಳು . ನನ್ನ ಮೇಲೆ ಇರುವ ಫಿರ್ಯಾದು ಏನು ಎಂದು ಸರಿಯಾಗಿ ತಿಳಿದುಕೊಂಡಿರುತ್ತೇನೆ ಎಂದರೆ ಸರಿಯಲ್ಲ . ಸಹಿ ಮಾಡು ಎಂದು ಹೇಳಿದ್ದರು , ಸಹಿ ಮಾತ್ರ ಮಾಡಿರುತ್ತೇನೆ. ಎರಡನೇ ಬಾರಿ ಹೋದಾಗ ಕೂಡ ನಾನು ನನ್ನಿಂದ ತಪ್ಪಾಗಿದೆ , ಮೂರು ಚೆಕ್ ಗಳನ್ನು ಹಿಂದಿರುಗಿಸುತ್ತೇನೆ ಎಂದು ಹೇಳಿದ್ದೆ ಎಂದರೆ ಸುಳ್ಳು . ಎರಡನೇ ಬಾರಿ ಹೋದಾಗ ಯಾವ ದಾಖಲಾತಿಗಳಿಗೆ ಸಹಿ ಮಾಡಿದ್ದೇನೆ ಆ ದಾಖಲಾತಿಗಳು ವಕೀಲರು ತರಿಸಿಕೊಂಡಿದ್ದಾರಾ ನಾನು ಕೇಳಿಲ್ಲ.

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

ಪಿಡಬ್ಲೂಃ 1

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.